**ಸಿಸಿ ನಂಃ 1934/2025**

**ಪಿ. ಡಬ್ಲ್ಯು 1**

**(ಇಂದು ದಿನಾಂಕಃ 15-12-2025 ರಂದು ಪಿ.ಡಬ್ಲ್ಯು.1 ರವರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)**

**ಪಾಟೀ ಸವಾಲುಃ- ಆರೋಪಿ ಪರ ವಕೀಲರಾದ ಶ್ರೀ ಜಿ ಎನ್ ಜಿ ರವರಿಂದಃ**

ನೀವು ಈ ಪ್ರಕರಣದ ಆರೋಪಿಯ ವಿರುದ್ಧ 2 ಚೆಕ್ ಬೌನ್ಸ ಕೇಸುಗಳನ್ನು ದಾಖಲಿಸಿದ್ದೇನೆ ಎಂದರೆ ಸರಿ. ಇದೇ ನ್ಯಾಯಾಲಯದಲ್ಲ ಸಿ.ಸಿ ನಂಬ್ರ 1683/2024 ರ ಪ್ರಕರಣ ವಜಾಗೊಂಡಿರುತ್ತದೆ ಎಂದರೆ ಸರಿ. ಸ್ರದ್ರಿ ವಜಾಗೊಂಡ ಕೇಸಿನ ತೀರ್ಪಿನ ವಿರುದ್ಧ ನೀವು ಅಪೀಲು ಸಲ್ಲಿಸಿರುವುದಿಲ್ಲ ಎಂದರೆ ಸರಿ. ಆ ರೀತಿ ವಜಾಗೊಂಡ ಸಿ.ಸಿ ನಂಬ್ರ 1683/2024 ರ ಪ್ರಕರಣ ಹಾಗೂ ಈ ಪ್ರಕರಣ ಒಂದೇ ವ್ಯವಹಾರಕ್ಕೆ ಸಂಬಂಧಪಟ್ಟ ಪ್ರಕರಣಗಳು ಎಂದರೆ ಸರಿ. ಸ್ರದ್ರಿ ಸಿ.ಸಿ ನಂಬ್ರ 1683/2024 ರ ಪ್ರಕರಣ ಹಾಗೂ ಈ ಪ್ರಕರಣದಲ್ಲಿ ರೂ.8,00,000/- ಹಣವನ್ನು ನಾನು ಆರೋಪಿಗೆ ಸಾಲವಾಗಿ ಕೊಟ್ಟಿದ್ದೆ ಅಂತಾ ವಕೀಲರ ನೋಟಿಸನ್ನು ನೀಡಿದ್ದೆ ಎಂದರೆ ಸರಿ. ಸ್ರದ್ರಿ ಸಿ.ಸಿ ನಂಬ್ರ 1683/2024 ರ ಪ್ರಕರಣವನ್ನು ಆರೋಪಿ ರೂ.8,00,000/- ಪೈಕಿ ರೂ.3,75,000/-ಕ್ಕೆ ಚೆಕ್ಕು ಕೊಟ್ಟಿದ್ದರು ಅಂತಾ ಸ್ರದ್ರಿ ಪ್ರಕರಣದ ಫಿರ್ಯಾದಿಯಲ್ಲಿ ಹೇಳಿದ್ದೆ ಎಂದರೆ ಸರಿ. ಅದೇ ರೀತಿ ಈ ಪ್ರಕರಣದಲ್ಲಿ ಬಾಕಿ ಉಳಿದ ರೂ. 4,25,000/-ಹಣಕ್ಕೆ ಆರೋಪಿ ಚೆಕ್ಕು ಕೊಟ್ಟಿದ್ದರು ಅಂತಾ ಈ ಪ್ರಕರಣದ ಫಿರ್ಯಾದಿಯಲ್ಲಿ ಹೇಳಿರುತ್ತೇನೆ ಎಂದರೆ ಸರಿ. ಈ ಪ್ರಕರಣದ ಚೆಕ್ಕು ಅಮಾನ್ಯಗೊಂಡ ನಂತರ ಆರೋಪಿಗೆ ವಕೀಲರ ನೋಟಿಸನ್ನು ಕೊಟ್ಟಿದ್ದೆ ಎಂದರೆ ಸರಿ.ಸ್ರದ್ರಿ ನೋಟಿಸಿಗೆ ಆರೋಪಿಯು ದಿನಾಂಕ 10-09-2024 ರಂದು ವಕೀಲರ ಮೂಲಕ ಉತ್ತರದ ನೋಟಿಸನ್ನು ಕೊಟ್ಟಿರುತ್ತಾರೆ ಎಂದರೆ ಸರಿ. ಈ ಹಂತದಲ್ಲಿ ಸಾಕ್ಷಿಗೆ ಆರೋಪಿ ಪರ ವಕೀಲರು ದಿನಾಂಕ 10-09-2024 ರ ಉತ್ತರ ನೋಟಿಸನ್ನು ಹಾಗೂ ಅಂಚೆ ರಶೀದಿಯನ್ನು ತೋರಿಸಿ ಸಾಕ್ಷಿ ಅವುಗಳನ್ನು ನೋಡಿ ಒಪ್ಪಿಕೊಂಡಿರುವುದರಿಂದ ವಕೀಲರ ಉತ್ತರದ ನೋಟಿಸನ್ನು **ನಿಡಿ-1** ಹಾಗೂ ಅಂಚೆ ರಶೀದಿಯನ್ನು **ನಿಡಿ-2** ಅಂತಾ ಗುರುತಿಸಲಾಯಿತು. ನಿಡಿ-1 ರ ಉತ್ತರದ ನೋಟಿಸಿನಲ್ಲಿ ಆರೋಪಿಯು ತಾನು ರೂ. 8,00,000/- ಪಡೆದುಕೊಂಡಿದ್ದು ಹಾಗೂ ಸ್ರದ್ರಿ ರೂ. 8,00,000/- ಹಣವನ್ನು ದಿನಾಂಕ 06-03-2023 ರಂದು ಕೆನರಾ ಬ್ಯಾಂಕ್ ,ಕಾರವಾರ ಶಾಖೆಯ ಚೆಕ್ ನಂಬ್ರ 128973 ರ ಮೂಲಕ ಮರುಪಾವತಿ ಮಾಡಿದ್ದೆ ಅಂತಾ ಹೇಳಿರುತ್ತಾರೆ ಎಂದರೆ ಸಾಕ್ಷಿ ಸ್ರದ್ರಿ ಉತ್ತರದ ನೋಟಿಸಿನಲ್ಲಿ ಹೇಳಿರುತ್ತಾರೆ ಆದರೆ ಅದು ಈ ಕೇಸಿನ ಹಣದ ವ್ಯವಹಾರಕ್ಕೆ ಸಂಬಂಧಿಸಿದ್ದಲ್ಲ, ಅದು ಜಮೀನು ವ್ಯವಹಾರಕ್ಕೆ ಸಂಬಂಧಿಸಿದಂತೆ ಆರೋಪಿಯ ಗಂಡ ಪ್ರಮೋದ ಗಾಂವಕರರವರು ಕಳುಹಿಸಿದ

ಹಣ ಅಂತಾ ಉತ್ತರಿಸುತ್ತಾರೆ. ಸದ್ರಿ ರೂ. 1,00,000/- ದ ಚೆಕ್ಕನ್ನು ಆರೋಪಿ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಸದ್ರಿ ಚೆಕ್ಕಿನ ಹಣ ಜಯಶ್ರೀ ಹೆಸರಿನಿಂದ ಜಮೀನು ವ್ಯವಹಾರಕ್ಕೆ ಸಂಬಂಧಿಸಿದಂತೆ ಆರೋಪಿಯ ಗಂಡ ಪ್ರಮೋದ ಗಾಂವಕರರವರು ಕಳುಹಿಸಿದ ಹಣ ಅಂತಾ ಉತ್ತರಿಸುತ್ತಾರೆ.

2. ದಿನಾಂಕ 19-05-2023 ರಂದು ಆರೋಪಿ ನಿಮಗೆ ರೂ.1,00,000/- ಹಣವನ್ನು ನಗದಾಗಿ ಕೊಟ್ಟಿದ್ದು ನೀವು ವ್ಯಾಟ್ಸಅಪ್ ಮೂಲಕ ಹಣ ಪಡೆದಿರುವ ಬಗ್ಗೆ ಸಂದೇಶ ಕಳುಹಿಸಿರುತ್ತೀರಿ ಎಂದರೆ ಸರಿಯಲ್ಲ.

3. ದಿನಾಂಕ 19-06-2023 ರಂದು ಆರೋಪಿಯು ನಿಮ್ಮ ಖಾತೆಗೆ ಆರ್.ಟಿ.ಜಿ.ಎಸ್ ಮೂಲಕ ರೂ. 6,80,000/-ಹಣವನ್ನು ವರ್ಗಾವಣೆ ಮಾಡಿರುತ್ತಾರೆ ಎಂದರೆ ಸಾಕ್ಷಿ ಅದು ಈ ಕೇಸಿಗೆ ಸಂಬಂಧಪಟ್ಟಿದ್ದಲ್ಲ, ಅದು ಆರೋಪಿಯ ಗಂಡ ಜಮೀನು ವ್ಯವಹಾರಕ್ಕೆ ಸಂಬಂಧಪಟ್ಟಂತೆ ಕಳುಹಿಸಿದ ಹಣ ಅಂತಾ ಉತ್ತರಿಸುತ್ತಾರೆ.

4. ನಿಡಿ-1 ರ ಉತ್ತರದ ನೋಟಿಸನ್ನು ನೀವು ಪಡೆದ ನಂತರ ಆ ಎಲ್ಲಾ ಹಣ ಪಾವತಿ ಹಾಗೂ ಹಣ ವರ್ಗಾವಣೆ ಈ ವ್ಯವಹಾರಕ್ಕೆ ಸಂಬಂಧಪಟ್ಟಿದ್ದಲ್ಲ ಹಾಗೂ ಅವುಗಳು ಆರೋಪಿಯ ಗಂಡನ ಜಮೀನು ವ್ಯವಹಾರಕ್ಕೆ ಸಂಬಂಧಪಟ್ಟ ಹಣ ಅಂತಾ ಆರೋಪಿಗೆ ಲಿಖಿತ ಮೂಲಕ ತಿಳಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲಾ ಅಂತಾ ಉತ್ತರಿಸುತ್ತಾರೆ.

5. ನಿಡಿ-1 ರ ಉತ್ತರ ನೋಟಿಸಿನಲ್ಲಿ ಹೇಳಿರುವ ವಿಷಯಗಳು ಸುಳ್ಳು ಅಥವಾ ಅದರಲ್ಲಿ ಉಲ್ಲೇಖಿಸಿರುವ ಹಣ ಪಾವತಿಯು ಈ ಕೇಸಿಗೆ ಸಂಬಂಧಿಸಿದ್ದಲ್ಲ, ಜಮೀನು ವ್ಯವಹಾರಕ್ಕೆ ಸಂಬಂಧಪಟ್ಟಿದ್ದು ಅಂತಾ ಈ ಪ್ರಕರಣದ ಫಿರ್ಯಾದಿಯಲ್ಲಿ ಹೇಳಿದ್ದೀರಾ ಎಂದರೆ ಸಾಕ್ಷಿ ಹೌದು ಅಂತಾ ಉತ್ತರಿಸುತ್ತಾರೆ. ಈ ಹಂತದಲ್ಲಿ ಆರೋಪಿ ಪರ ವಕೀಲರ ಈ ಪ್ರಕರಣದ ಫಿರ್ಯಾದನ್ನು ಸಾಕ್ಷಿಗೆ ತೋರಿಸಿ ಆ ರೀತಿ ಎಲ್ಲಿ ಹೇಳಲಾಗಿದೆ ಅಂತಾ ಕೇಳಿದ್ದಕ್ಕೆ ಸಾಕ್ಷಿ ಫಿರ್ಯಾದನ್ನು ನೋಡಿ, ಓದಿಕೊಂಡು ಸಾಕ್ಷಿ ನಾನು ಆ ವಿಷಯವನ್ನು ನಮ್ಮ ವಕೀಲರಿಗೆ ಹೇಳಿದ್ದೆ ಆದರೆ ಅವರು ಫಿರ್ಯಾದಿಯಲ್ಲಿ ನಮೂದಿಸಿಲ್ಲ ಅಂತಾ ಉತ್ತರಿಸುತ್ತಾರೆ. ಸಾಕ್ಷಿ

ಮುಂದುವರಿದು ಅಸಂಭದ್ಧ ಅಂತಾ ಒಂದೇ ವಾಕ್ಯದಲ್ಲಿ ಫಿರ್ಯಾದಿಯಲ್ಲಿ ಹೇಳಿರುತ್ತಾರೆ ಅಂತಾ ಉತ್ತರಿಸುತ್ತಾರೆ. ಆರೋಪಿ ನಿಮಗೆ ಸಲ್ಲಬೇಕಾಗಿದ್ದ ರೂ. 8,00,000/- ಹಣವನ್ನು ಅದಕ್ಕೆ ರೂ. 80,000/- ಹೆಚ್ಚುವರಿಯಾಗಿ ನೀವು ಕೇಳಿದ ಪ್ರಕಾರ ಬಡ್ಡಿ ಸೇರಿಸಿ ಮರುಪಾವತಿ ಮಾಡಿರುತ್ತಾರೆ ಎಂದರೆ ಸುಳ್ಳು.

6. ಆರೋಪಿಗೆ ನೀವು ರೂ. 8,00,000/- ಹಣ ಕೊಡುವಾಗ ಅವರ ಕಡೆಯಿಂದ ಭದ್ರತೆಗಾಗಿ 2 ಚೆಕ್ಕುಗಳನ್ನು ತೆಗೆದುಕೊಂಡಿದ್ದೀರಿ ಎಂದರೆ ಸುಳ್ಳು. ಆರೋಪಿಯಿಂದ ನಿಮಗೆ ಬರಬೇಕಾದ ಹಣ ಮುಟ್ಟಿದ್ದರೂ ಸಹ ಆರೋಪಿಯ ವಿರುದ್ಧ ಚೆಕ್ಕನ್ನು ದುರುಪಯೋಗಪಡಿಸಿಕೊಂಡು ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತಿರಿ ಎಂದರೆ ಸರಿಯಲ್ಲ. ಆರೋಪಿ ನಿಮಗೆ ಹಣ ಕೊಟ್ಟ ನಂತರ ಅವರು ಭದ್ರತೆಗಾಗಿ ಕೊಟ್ಟ ಚೆಕ್ಕುಗಳನ್ನು ವಾಪಾಸು ಕೊಡಿ ಅಂತಾ ಕೇಳಿದ್ದರೂ ಸಹ ನೀವು ಕೊಡದೇ ಅವುಗಳನ್ನು ಕಳೆದುಕೊಂಡಿದ್ದೇನೆ ಅಂತಾ ಹೇಳಿದ್ದೀರಿ ಎಂದರೆ ಸರಿಯಲ್ಲ. ಆರೋಪಿ ನಿಮಗೆ ಕೊಡಬೇಕಾದ ಯಾವುದೇ ಹಣ ಬಾಕಿ ಇರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲಾ .**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ**

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಕಾರವಾರ.**